‘‘ಆಲ್ಬರ್ಟ್?’’ ಕೆಲ ಸಮಯದ ನಂತರ ಮೇಬಲ್ ಉದ್ಗರಿಸಿದಳು.

‘‘ಏನು ಡಿಯರ್?’’ ತಲೆಯನ್ನು ಮೇಲೆತ್ತದೆಯೇ ಕೇಳಿದ ಆಲ್ಬರ್ಟ್.

‘‘ನಿನ್ನೆ ರಾತ್ರಿ ನೀನು ಏನನ್ನೋ ತೋರಿಸುವುದಕ್ಕಾಗಿ ನನ್ನನ್ನು ಕರೆದಿದ್ದೆ. ಈಗ ನೆನಪಿಗೆ ಬರ್ತಾ ಇದೆ ನೋಡು...’’

ನಿಯತಕಾಲಿಕವನ್ನು ಕೆಳಗಿಟ್ಟು, ಅದೇನಿರಬಹುದೆಂದು ಆಲ್ಬರ್ಟ್ ಬಹಳ ಹೊತ್ತು ಯೋಚಿಸತೊಡಗಿದ.

ಅವನ ತುಟಿಗಳ ಮೇಲೆ ಮಂದಹಾಸ ಮೂಡತೊಡಗಿತು.

‘‘ಮಗು ಈಗಲಾದರೂ ಹುಶಾರಾಯಿತು ಎಂದು ನಂಬುತ್ತೀಯಾ ಮೇಬಲ್? ಅವಳನ್ನು ನಾನೇ ಗುಣಪಡಿಸಿದ್ದು... ಏನಂತೀಯಾ?’’

‘‘ಅದು ನಿಜ, ಡಿಯರ್. ಎಳ್ಳಷ್ಟೂ ಸಂಶಯವಿಲ್ಲ’’ ಎನ್ನುತ್ತಾ ಅವಳು ಹೆಣಿಗೆ ಮುಂದುವರೆಸಿದಳು.

‘‘ಹೇಗಂತ ಕೇಳೋದಿಲ್ವೇನೆ?’’

‘‘ಹಾಲು ಒಂದು ಹದಕ್ಕೆ ಬಿಸಿ ಮಾಡುವುದರಲ್ಲಿ ನೀನು ನನಗಿಂತ ನಿಪುಣ ಬಿಡು!’’ ಎಂದಳು ಮೇಬಲ್. ‘‘ನೀನು ಫೀಡಿಂಗ್ ತಯಾರು ಮಾಡಲುಪಕ್ರಮಿಸಿದ ನಂತರವೇ ಪುಟ್ಟಿ ಹಾಲು ಕುಡಿಯಲು ಶುರು ಮಾಡಿದ್ದು.’’

‘‘ಹಾಲು ಬಿಸಿ ಮಾಡುವುದೇ ಒಂದು ಕಲೆ ಎಂದು ನಂಬುತ್ತೀಯಾ ಮೇಬಲ್?!’’ ಆಲ್ಬರ್ಟ್ ಕೇಳಿದ.

‘‘ಇರಬಹುದೇನೋ?’’ ಹೆಣಿಗೆ ಮುಂದುವರೆಸುತ್ತಾ ಮೇಬಲ್ ಹೇಳಿದಳು. ‘‘ಈ ಗಂಡಸರು ನಿಜಕ್ಕೂ ವಿಚಿತ್ರವಪ್ಪಾ!’’ ಎಂದು ಮನಸ್ಸಿನಲ್ಲೇ ಅಂದುಕೊಂಡಳು.

‘‘ನೀನು ಹೇಳುವುದು ಒಂದು ವಿಧದಲ್ಲಿ ನಿಜ ಕೂಡ.’’ ಅವನು ಹೇಳಿದ. ‘‘ಬಿಸಿ ಮಾಡುವುದಕ್ಕಿಂತ ಹಾಲಿನೊಳಗೆ ಏನು ಬೆರೆಸಿ ಬಿಸಿ ಮಾಡಿದೆ ಎನ್ನುವುದೇ ನನ್ನ ಗುಟ್ಟು!’’

ಮೇಬಲ್ ಒಮ್ಮೆಲೇ ಹೆಣಿಗೆ ಕಡ್ಡಿಗಳನ್ನು ಬದಿಗಿಟ್ಟು ಅವನನ್ನೇ ತೀಕ್ಷ್ಣವಾಗಿ ನೋಡಿದಳು.

‘‘ಆಲ್ಬರ್ಟ್!?’’ ಅವಳ ದನಿ ಏರಿತ್ತು. ‘‘ಪುಟ್ಟಿಯ ಹಾಲಿನಲ್ಲಿ ನೀನು ಬೇರೆ ಏನನ್ನೋ ಬೆರೆಸುತ್ತಿದ್ದೀಯಾ?’’

ಅವನು ಉತ್ತರಿಸಲಿಲ್ಲ. ಬದಲಿಗೆ, ನಿಗೂಢವಾಗಿ ನಕ್ಕ.

‘‘ಹೌದು ತಾನೆ?’’ ಅವಳ ದನಿ ಮತ್ತೂ ತೀಕ್ಷ್ಣವಾಗಿತ್ತು.

‘‘ಇರಬಹುದೇನೋ!’’

‘‘ಆಲ್ಬರ್ಟ್!...’’ ನನಗೆ ಇದನ್ನು ನಂಬಲಿಕ್ಕಾಗುತ್ತಿಲ್ಲ!’’

ಅವನು ಮುಗುಳ್ನಗುತ್ತಲೇ ಇದ್ದ.

‘‘ಆಲ್ಬರ್ಟ್, ನೀನು ತಮಾಷೆ ಮಾಡಬೇಡ. ನಿಜ ಹೇಳು. ಅದು ಪುಟ್ಟಿಯ ಆರೋಗ್ಯದ ಮೇಲೆ ಅಡ್ಡ ಪರಿಣಾಮಗಳನ್ನು ಬೀರಬಹುದು!’’

‘‘ಹೌದು ಮೇಬಲ್. ನಾನು ಬೆರೆಸಿದ್ದೇನೆ. ಯೆಸ್!’’

‘‘ಆಲ್ಬರ್ಟ್!!... ಹೌ ಡೇರ್ ಯೂ...’’ ಅವಳು ಚೀರಿದಳು.

‘‘ಮೇಬಲ್, ನೀನು ಸುಖಾ ಸುಮ್ಮನೆ ಉದ್ವೇಗಗೊಳ್ಳಬೇಡ. ನಾನು ವಿವರಿಸುತ್ತೇನೆ. ಶಾಂತಳಾಗು.’’

‘‘ನೀನು ‘ಬಿಯರ್’ ಬೆರೆಸಿದೆ ಅಲ್ಲಾ?’’